# ಸಹಾಯಕ ಆಯುಕ್ತರ ನ್ಯಾಯಾಲಯ, ಬಳ್ಳಾರಿ

ಸಂ: ಕಂದಾಯ/ಅಪೀಲು/38/2016-17 ದಿನಾಂಕ :30/08/ 2016

ಉಪಸ್ಥಿತರು: **ಶ್ರೀಲೋಕೇಶ್.ಪಿ.ಎನ್.** (ಕ.ಆ.ಸೇ)

**ಸಹಾಯಕ ಆಯುಕ್ತರು, ಬಳ್ಳಾರಿ.**

| ವಾದಿಗಳು | ಪ್ರತಿವಾದಿಗಳು |
|---|---|
| 1.ಶ್ರೀ ವಿರೇಶಪ್ಪ,ತಂದೆ ಲೇಟ್ ಶೇಷಪ್ಪ<br>ಕೆ.ಬೆಳಗಲ್ಲು ,ಗ್ರಾಮ ಸಿರುಗುಪ್ಪ ತಾಲೂಕು.<br>(ಶ್ರೀಕೆ.ಲಿಂಗರಾಜು,ಕೆ.ಪಿ.ಅಯ್ಯಪ್ಪ,ವಕೀಲರು,ಬಳ್ಳಾರಿ) | 1.ತಹಶೀಲ್ದಾರರು, ಸಿರುಗುಪ್ಪ<br>2.ಕುಂಬಾರ ವಿರೇಶಪ್ಪ ತಂದೆ ಲೇಟ್ ಕುಂಬಾರ ಈರಣ್ಣ,<br>ಸಿರುಗುಪ್ಪ ತಾಲೂಕು |

**ದಾವಾ ಜಮೀನಿನ ವಿವರ :-**

| ತಾಲ್ಲೂಕು | ಗ್ರಾಮ | ಸ. ನಂ. | ವಿಸ್ತೀರ್ಣ (ಎಕರೆಗಳಲ್ಲಿ) |
|---|---|---|---|
| ಸಿರುಗುಪ್ಪ | ಕೆ.ಬೆಳಗಲ್ಲು | 82 | 1.00 |

--@@@--

ವಾದಿಯು ಅವರ ವಕೀಲರ ಮುಖಾಂತರ ಕರ್ನಾಟಕ ಭೂ ಕಂದಾಯ ಕಾಯ್ದೆ 1964 ರ ಕಲಂ 136(2) ರಡಿಯಲ್ಲಿ ತಹಶೀಲ್ದಾರರು,ಸಿರುಗುಪ್ಪ ಇವರ ಪಹಣಿ/ಹ.ಬ/530/13-14 ದಿನಾಂಕ:05.02.2015 ರ ಆದೇಶದ ವಿರುದ್ಧ ಈ ನ್ಯಾಯಾಲಯಕ್ಕೆ ಮೇಲ್ಮನವಿಯನ್ನು ಸಲ್ಲಿಸಿರುತ್ತಾರೆ. ಸದರಿ ಮೇಲ್ಮನವಿಯನ್ನು ಸಲ್ಲಿಸುವಲ್ಲಿ ಆದ ವಿಳಂಬಕ್ಕೆ ಕಾಲಮಿತಿ ಕಾಯ್ದೆಯಡಿ ವಿಳಂಬ ಮನ್ನಾಕ್ಕೆ ಅರ್ಜಿ ಸಲ್ಲಿಸಿರುತ್ತಾರೆ. ವಿಳಂಬ ಮನ್ನಾ ಮಾಡಿ ಪ್ರಕರಣವನ್ನು ದಾಖಲಿಸಿಕೊಳ್ಳಲಾಗಿರುತ್ತದೆ. ನೈಸರ್ಗಿಕ ನ್ಯಾಯ ದೃಷ್ಠಿಯಿಂದ ಉಭಯ ಪಕ್ಷಗಾರರಿಗೂ ನೋಟೀಸಗಳನ್ನು ಕಳುಹಿಸಿ ದಿನಾಂಕ:12.07.2016,30.08.2016ರಂದು ಪ್ರಕರಣದ ವಿಚಾರಣೆಯನ್ನು ಕೈಗೊಳ್ಳಲಾಗಿರುತ್ತದೆ.

ಸದರಿ ಪ್ರಕರಣಕ್ಕೆ ಸಂಬಂಧಿಸಿದಂತೆ ವಾದಿಗಳು ಈ ನ್ಯಾಯಾಲಯಕ್ಕೆ ಮೇಲ್ಮನವಿಯನ್ನು ಸಲ್ಲಿಸಿ ಸಿರುಗುಪ್ಪ ತಾಲೂಕು , ಕೆ.ಬೆಳಗಲ್ಲು ಗ್ರಾಮದ ಸ.ನಂ.82,ವಿಸ್ತೀರ್ಣ:1.00 ಎಕರೆ ಜಮೀನನ್ನು ಮೇಲ್ಮನವಿದಾರರ ತಂದೆಯಾದ ಶೇಷಪ್ಪ ಇವರು ನೊಂದಾಯಿತ ಕ್ರಯಪತ್ರ ಸಂಖ್ಯೆ1158/1964 ರಲ್ಲಿ ನರಸಪ್ಪ ತಂದೆ ಸಣ್ಣಈರಣ್ಣ ಇವರಿಂದ ಕ್ರಯಕ್ಕೆ ಪಡೆದಿರುತ್ತಾರೆ.ಮುಂದುವರೆದು ಕ್ರಯಪತ್ರದಂತೆ ಹಕ್ಕು ಬದಲಾವಣೆ,ಕೋರಿ ಸಲ್ಲಿಸಿದ ಅರ್ಜಿಗೆ ತಹಶೀಲ್ದಾರರು,ಸಿರುಗುಪ್ಪ ಇವರು ಮಾರಾಟಗಾರರ ಹೆಸರು ಪಹಣಿಯಲ್ಲಿ ನಮೂದಿಲ್ಲದಿರುವ ಕಾರಣವಾಗಿ, ಮನವಿದಾರರಿಗೆ ದಿನಾಂಕ:05.02.2015 ರಂದು ಹಿಂಬರಹದ ನೀಡಿರುತ್ತಾರೆ .

ತಹಶೀಲ್ದಾರರು,ಸಿರುಗುಪ್ಪ ಇವರು ನೀಡಿರುವ ಹಿಂಬರಹವನ್ನು ಪ್ರಶ್ನಿಸಿಸುತ್ತಾ,ಮನವಿದಾರರು ಈ ನ್ಯಾಯಾಲಯಕ್ಕೆ ಕ್ರಯಪತ್ರದಂತೆ ಹಕ್ಕುದಾಖಲಿಸಲು ಕೋರಿರುತ್ತಾರೆ.ಪ್ರಕರಣದಲ್ಲಿನ ಲಭ್ಯ ದಾಖಲೆಗಳಾದ ಪಹಣಿ, ಇ.ಸಿ ಕ್ರಯಪತ್ರಗಳನ್ನು ಪರಿಶೀಲಿಸಲಾಗಿ ಸದರಿ ಪ್ರಕರಣವು ತಿದ್ದುಪಡಿ Old-J-Slep ಗೆ ಸಂಬಂಧಿಸಿದಾಗಿದ್ದು,ಕಾರಣ ಕೆ.ಬೆಳಗಲ್ಲು ಗ್ರಾಮದ ಸ.ನಂ.82 ವಿಸ್ತೀರ್ಣ:1.00 ಜಮೀನಿಗೆ ಸಂಬಂಧಿಸಿದಂತೆ ಅಗ್ಯತ ಕ್ರಮವಹಿಸಲು ತಹಶೀಲ್ದಾರರು,ಸಿರುಗುಪ್ಪ ಇವರಿಗೆ ಆದೇಶಿಸುವ ಈ ಕೆಳಕಂಡ ಆದೇಶ.

:: **ಆದೇಶ** ::

**<u>ವಾದಿಯ ಮೇಲ್ಮನವಿಯನ್ನು ಭಾಗಶಃ ಪುರಸ್ಕರಿಸಿದೆ:-</u>**

ಪೀಠಿಕೆಯಲ್ಲಿ ವಿವರಿಸಿದ ಕಾರಣಗಳ ಹಿನ್ನೆಲೆಯಲ್ಲಿ ಸಿರುಗುಪ್ಪ ತಾಲ್ಲೂಕಿನ ಕೆ.ಬೆಳಗಲ್ಲು ಗ್ರಾಮದ 82ಪೈಕಿ , ವಿಸ್ತೀರ್ಣ:1.00 ಎಕರೆ ಜಮೀನಿಗೆ ಸಂಬಂಧಿಸಿದಂತೆ ಪ್ರಕರಣವು ತಿದ್ದುಪಡಿ Old-J-Slep ನಲ್ಲಿ ತೆಗೆದು ಕೊಂಡು ಅಗ್ಯತ ಕ್ರಮ ವಹಿಸಲು ತಹಶೀಲ್ದಾರರು,ಸಿರುಗುಪ್ಪ ಇವರಿಗೆ ಆದೇಶಿಸಿದೆ.

ಈ ಆದೇಶವನ್ನು ಹೇಳಿ, ಬರೆಯಿಸಿ ತಪ್ಪುಗಳನ್ನು ತಿದ್ದಿ **ದಿನಾಂಕ: 30.08.2016** ರಂದು ಬಹಿರಂಗ ನ್ಯಾಯಾಲಯದಲ್ಲಿ ಘೋಷಿಸಲಾಗಿದೆ.

ಸಹಾಯಕ ಆಯುಕ್ತರು,

ಸಹಾಯಕ ಆಯುಕ್ತರು,
ಬಳ್ಳಾರಿ.